**ಪಾಠ–8** **ಮೇ 18–24**

# ಮಕ್ಕಳನ್ನು ಹಡೆಯುವ ಮತ್ತು ಸಾಕುವ ಕಾಲ



**ಸಬ್ಬತ್ತಿನ ಮಧ್ಯಾಹ್ನ :** ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ : ಆದಿಕಾಂಡ 18:11; ಯೆರೆ 31:25, ಮತ್ತಾ 11:28; ಕೀರ್ತ 127, ಜ್ಞಾ 22:6; 1 ಸಾಮು 3:10–14; ಫಿಲಿ 3:13.

**ಸ್ಮರಣವಾಕ್ಯ : ಪುತ್ರಸಂತಾನವು ಯೆಹೋವನಿಂದ ಬಂದ ಸ್ವಾಸ್ತ್ಯವು; ಗರ್ಭ ಫಲವು ಆತನ ಬಹುಮಾನವೇ (ಕೀರ್ತ 127:3).**

ಮಕ್ಕಳನ್ನು ಹೆರುವುದು ಹೇಗೆ ಸಾಮಾನ್ಯವಾದ ಮತ್ತು ಸಹಜವಾದ ಘಟನೆಯಾಗಿದೆಯೆಂದರೆ ಅವುಗಳು ಎಂಥಾ ಅದ್ಭುತವಾಗಿವೆಯಾದರೂ ಅವುಗಳನ್ನು ಪೂರ್ಣವಾಗಿ ಮೆಚ್ಚಲಾರೆವು. ಆದಿದಂಪತಿಗಳಾದ ಆದಾಮ ಮತ್ತು ಹವ್ವಳಿಗೆ ಮೊಟ್ಟ ಮೊದಲು ಮಗು ಹುಟ್ಟಿದಾಗ ಅದನ್ನು ಹವ್ವಳು ತನ್ನ ಕೈಗಳಲ್ಲಿ ಹಿಡಿದುಕೊಂಡಾಗ ಎಂಥಾ ಅನುಭವವಾಗಿರಬಹುದು ಊಹಿಸಿಕೊಳ್ಳಿರಿ. ಮಗುವು ಹೊಟ್ಟೆಯಲ್ಲಿ ಬೆಳವಾಗಿನ ಆ ತಿಂಗಳುಗಳಲ್ಲಿ ಆಗುವ ದೈಹಿಕ ಬದಲಾವಣೆಗಳು, ಮಗುವನ್ನು ಹೆರುವಾಗ ಆಗುವ ಕಡುಯಾತನೆ ನಂತರ ತಮ್ಮನ್ನು ಬಹಳವಾಗಿ ಹೋಲುವ ಪುಟ್ಟ ಮಗುವು ಬರುತ್ತದೆ. ಹೆರಿಗೆ ಸಮಯವು ತಾಯಿಯ ಪ್ರಾಣಕ್ಕೆ ಗಂಡಾಂತರಕಾರಿಯಾಗಿರುತ್ತದೆ.

ವಯಸ್ಸು ಮೀರಿ ಹೋದ 90 ವರ್ಷದ ಸಾರಳಿಗೆ ಮಗು ಹಡೆಯುವಾಗ ಎಂಥಾ ಅನುಭವವಾಗಿರಬಹುದು. ತನ್ನ ಸ್ವಂತ ಮಗುವಾದ ಇಸಾಕನ ಮುಖವನ್ನು ಆಲೋಚಿಸುವಾಗಲೆಲ್ಲಾ ಆಕೆಯು ನಕ್ಕಿರಬಹುದು. ಹವ್ವಳು ಒಂದು ಗಂಡುಮಗುವನ್ನು ದಯಪಾಲಿಸೆಂದು ದೇವರನ್ನು ಬೇಡುತ್ತಿದ್ದಳು. ದೇವರು

ಆಕೆಗೆ ಮಗುವನ್ನು ದಯಪಾಲಿಸಿದಾಗ ಮಗುವನ್ನು ಎತ್ತುಕೊಂಡು "ಇದಕ್ಕಾಗಿ ನಾನು ಪ್ರಾರ್ಥಿಸಿದೆನು ದೇವರು ನನ್ನ ಪ್ರಾರ್ಥನೆಗೆ ಉತ್ತರಿಸಿದ್ದಾನೆ" ಎಂದು ಎಷ್ಟು ಹೊತ್ತು ಅಂದುಕೊಂಡಿರಬಹುದು ಯಾರಿಗೆ ಗೊತ್ತು? (1 ಸಮು 1:27). ದೇವರಾತ್ಮನಿಂದ ಪಡೆದ ಮಗುವನ್ನು ಅಪ್ಪಿಕೊಂಡಿದ್ದ ಇನ್ನೂ ಯುವತಿಯಾಗಿದ್ದ ಮರಿಯಳ ಹೃದಯವು ಭಯ ಮತ್ತು ಆಶ್ಚರ್ಯಚಕಿತ ವಿಸ್ಮಯವನ್ನು ಅನುಭವಿಸಿತ್ತು.

ಇದೇ ಸಂದರ್ಭದಲ್ಲಿ ಪೋಷಕರಾಗಿ ಪ್ರತಿಯೊಬ್ಬರೂ ಮಗುವನ್ನು ಹೆರುವ ಸೌಭಾಗ್ಯವನ್ನು ಅದರೊಡನೆ ಸಾಕಿಸಲಹುವ ಜವಾಬ್ದಾರಿಯನ್ನು ಪಡೆದಿರುವುದಿಲ್ಲ. ಈ ವಾರ ನಾವು ಮಕ್ಕಳನ್ನು ಪಡೆದು ಅವುಗಳನ್ನು ಸಾಕುವುದರಲ್ಲಿರುವ ಸವಾಲುಗಳು, ಭಯ, ಸಮಾಧಾನ ಸಂತೋಷದ ಬಗ್ಗೆ ಕೂಲಂಕುಷವಾಗಿ ಅಧ್ಯಯನ ಮಾಡೋಣ.

**ಭಾನುವಾರ** **ಮೇ 19**

## ಮಕ್ಕಳಿಲ್ಲದ ದಂಪತಿಗಳು

ಓದಿರಿ ಆದಿಕಾಂಡ 18:11; 30:1 ಮತ್ತು 1 ಸಮು 1:1–8 ಮತ್ತು ಲೂಕ 1:7. ಈ ವ್ಯಕ್ತಿಗಳಲ್ಲಿ ಸಾಮಾನ್ಯವಾಗಿರುವ ವಿಷಯ ಯಾವುದು? ಅವರ ಹಂಬಲಿಕೆಗೆ ದೇವರು ಹೇಗೆ ಉತ್ತರಿಸಿದನು?

ಮಕ್ಕಳು ಒಂದು ಆಶೀರ್ವಾದವಾಗಿದ್ದಾರೆ. ಆದರೆ ಅನೇಕ ಸಲ ಕೆಲವು ಕಾರಣಗಳಿಗೆ ದೇವರು ಪ್ರತಿಯೊಬ್ಬರಿಗೂ ಮಕ್ಕಳ ಫಲವನ್ನು ಕೊಟ್ಟಿರುವುದಿಲ್ಲ. ಕೆಲವರು ಕುಟುಂಬಕ್ಕಾಗಿ ನಿರೀಕ್ಷೆಯಿಟ್ಟು ಪ್ರಾರ್ಥಿಸುತ್ತಾರೆ. ಅವರಿಗೆ ದೇವರು ಕೃಪಾಪೂರ್ಣನಾಗಿ ಸಾರಳಿಗೆ ಕೊಟ್ಟಂತೆ ಅದ್ಭುತವಾಗಿ ಮಕ್ಕಳನ್ನು ಅನುಗ್ರಹಿಸುತ್ತಾನೆ. ಮತ್ತೆ ದೇವರ ಸನ್ನಿಧಾನಕ್ಕೆ ಸಲ್ಲಿಸುವ ಕೆಲವರ ಮನವಿಗಳಿಗೆ ಕಿವುಡಾಗಿಸುವ ಮೌನ ಮಾತ್ರ ಸಿಗುತ್ತದೆ. ತಮಗೆ ಕೊಡಲ್ಪಟ್ಟ ಗರ್ಭ ಫಲಕ್ಕಾಗಿ ಸ್ನೇಹಿತರು ದೇವರಿಗೆ ಸ್ತೋತ್ರ ಹೇಳುವಾಗ ಮತ್ತು ಅವರು ಮಕ್ಕಳನ್ನು ಹೆತ್ತು ಅವುಗಳನ್ನು ಸ್ವಾಗತಿಸುವಾಗಲಿಲ್ಲ. ಹೆರಲಾರದವರ ಮನಸ್ಸಿಗೆ ಆಳವಾದ ಗಾಯಗಳಾಗುತ್ತವೆ.

ನಿಮಗೆ ಎಷ್ಟು ಮಕ್ಕಳು ಎಂದು ಇತರರು ತಿಳಿಯದೆ ಕೇಳುವ ಪ್ರಶ್ನೆಗಳು ಮಕ್ಕಳಿಲ್ಲದವರಿಗೆ ಅವರನ್ನು ಪ್ರತ್ಯೇಕ ಗುಂಪಿಗೆ ಸೇರಿದವರೆಂದು ಹೊರತುಪಡಿಸಿ ನೋವನ್ನುಂಟು ಮಾಡುವ ಜ್ಞಾಪನ ಪತ್ರಗಳಂತೆ ಕೆಲಸ ಮಾಡುತ್ತವೆ. ಆದರೆ ಮಕ್ಕಳಾಗದವರ ಗುಂಪಿಗೆ ತಾವೂ ಸೇರಬೇಕೆಂದು ಬಯಸುತ್ತಾರೆ.

ಯಾರಿಗೆ ಅಂತಹ ಅನುಭವ ಆಗಿರುತ್ತದೋ ಅವರು ದೇವರಿಗೆ ತಮ್ಮ ದುಃಖವು ಅರ್ಥವಾಗುತ್ತದೆ ಎಂಬುದನ್ನು ಸ್ವೀಕರಿಸುವವರಾಗಿರಬೇಕು. ಕೀರ್ತನೆಗಾರನು ದೇವರನ್ನು ಕುರಿತು ಹೀಗೆ ಸಾರಿ ಹೇಳುತ್ತಾನೆ. ನಾನು ದೇಶ ಭ್ರಷ್ಟನಾಗಿ ಅಲೆದಾಡುವುದನ್ನು ನೀನೇ ಬಲ್ಲೆ. ನನ್ನ ಕಣ್ಣೀರು ನಿನ್ನ ಬುದ್ದಲಿಯಲ್ಲಿ ತುಂಬಿದೆ. ಅದರ ವಿಷಯ ನಿನ್ನ ಪುಸ್ತಕದಲ್ಲಿ ಬರೆದಿದೆಯಲ್ಲಾ (ಕೀರ್ತ 56:8). ಆತನು ಮೌನಿಯಂತೆ ಕಂಡರೂ "ತಂದೆಯು ಮಕ್ಕಳನ್ನು ಕನಿಕರಿಸುವಂತೆ ಯೆಹೋವನು ತನ್ನಲ್ಲಿ ಭಯಭಕ್ತಿಯುಳ್ಳವರನ್ನು ಕನಿಕರಿಸುತ್ತಾನೆ (ಕೀತ 103:13).

ಮತ್ತೆ ಕೆಲವರು ಬೇರೆ ಬೇರೆ ಕಾರಣಗಳಿಗೆ ಮಕ್ಕಳನ್ನು ಪಡೆಯುವುದು ಬೇಡ ಎಂದು ಆಯ್ಕೆಯನ್ನು ಮಾಡುತ್ತಾರೆ. ಬರೀ ಕಷ್ಟ ಸಂಕಟಗಳು, ನೋವು, ಕೆಟ್ಟತನ ಮತ್ತು ವಿಪತ್ತುಗಳು ಆಗುವ ಸಾಧ್ಯತೆಯಿಂದ ತುಂಬಿರುವ ಈ ಲೋಕಕ್ಕೆ ಇನ್ನೂ ಹೆಚ್ಚಾಗಿ ಜನರನ್ನು ತುಂಬ ಬಾರದೆಂದು ಕೆಲವರು ನಿರ್ಧರಿಸುವುದನ್ನು ನಾವು ಅರ್ಥಮಾಡಿಕೊಳ್ಳಬಹುದಾಗಿದೆ.

ಇನ್ನು ಕೆಲವು ಸಂದರ್ಭಗಳಲ್ಲಿ ಅನೇಕರು ತಮ್ಮದೇ ಆದ ಮಕ್ಕಳನ್ನು ಪಡೆದುಕೊಳ್ಳಲೊಲ್ಲದೆ ಬೇರೆಯವರ ಮಕ್ಕಳನ್ನು ದತ್ತು ತೆಗೆದುಕೊಂಡು ಅವುಗಳನು ಸಾಕಿಸಲಹುತ್ತಾ ತಮ್ಮ ಸ್ವಂತ ಮಕ್ಕಳಿಗಿಂತಲೂ ಉತ್ತಮವಾದ ಸೌಲಭ್ಯಗಳನ್ನು (ಅವಕಾಶಗಳನ್ನು) ಅವುಗಳಿಗೆ ಕೊಡುತ್ತಾರೆ.

ಈ ಲೋಕವು ಒಂದು ಸಂಕೀರ್ಣವಾದ ಸ್ಥಳವಾಗಿದ್ದು ಇಲ್ಲಿ ಮಕ್ಕಳು ಬೇಕೆನ್ನುವ ಮತ್ತು ಬೇಡವೆನ್ನುವ ಎಲ್ಲಾ ತರದ ಜನರನ್ನು ಎಲ್ಲಾ ತರದ ಸಂದರ್ಭಗಳನ್ನು ಸಂಧಿಸುತ್ತೇವೆ. ಮಕ್ಕಳನು ಪಡೆಯುವ ವಿಷಯದಲ್ಲಿ ನಾವು ಯಾವುದೇ ಸನ್ನಿವೇಶದಲ್ಲಿ ನಮ್ಮನ್ನು ಕಂಡುಕೊಂಡರೂ ನಮಗೋಸ್ಕರ ನಮ್ಮ ಉತ್ತಮವಾದ ಅಂತ್ಯಸ್ಥಿತಿಗೋಸ್ಕರ ದೇವರಲ್ಲಿ ಪ್ರೀತಿಯ ಭರವಸೆಯುಳ್ಳವರಾಗಿ

ಜೀವಿಸಬಹುದಾಗಿದೆ. ಅದೇ ಸಂದರ್ಭದಲ್ಲಿ ಯಾವುದೇ ಕಾರಣಗಳಿಗಾದರೂ ಸರಿಯೇ ಮಕ್ಕಳಿಲ್ಲದವರೊಂದಿಗೆ ಯಾವಾಗಲು ಆದಷ್ಟು ಸೂಕ್ಷ್ಮ ಸಂವೇದನೆಯುಳ್ಳವರಾಗಿರುವುದಕ್ಕೆ ನಾವು ನೆನಪಿನಲ್ಲಿಟ್ಟುಕೊಳ್ಳೋಣ.

ಯೇಸುಕ್ರಿಸ್ತನಿಗೆ ಮನುಷ್ಯರ ಹಾಗೆ ಸ್ವಂತ ಮಕ್ಕಳಿಲ್ಲವೆಂಬ ಸಂಗತಿಯಲ್ಲಿ ಏನಾದರೂ ಇರುವುದಾದರೆ ನಮಗೆ ಯಾವ ಪಾಠಗಳಿರಬಹುದು?

**ಸೋಮವಾರ** **ಮೇ 20**

## ಮಕ್ಕಳನ್ನು ಒಂಟಿಯಾಗಿ ಸಾಕುವುದು

ಯಾವಾಗಲೂ ಅಲ್ಲದಿದ್ದರು ಅನೇಕ ಸಲ ಸ್ತ್ರೀಯರು ಒಂಟಿಯಾಗಿ ತಮ್ಮ ಮಕ್ಕಳನ್ನು ಸಾಕಬೇಕಾದ ವಿದ್ಯಾಮಾನಗಳನ್ನು ಈ ಲೋಕದಲ್ಲಿ ಕಾಣುತ್ತೇವೆ. ಅನೇಕ ಸಂದರ್ಭಗಳಲ್ಲಿ ಹೆಣ್ಣು ಒಂಟಿಯಾಗಿ ಮಗುವನ್ನು ಸಾಕುವಾಗ ಆಕೆಯು ವಿವಾಹೇತರ ಸಂಬಂಧದಿಂದ ಗರ್ಭವತಿಯಾಗಿ ಮಗುವನ್ನು ಹೆತ್ತಿದ್ದಾಳೆಂದು ನಾವು ಭಾವಿಸಿಕೊಳ್ಳುತ್ತೇವೆ. ಆದಾಗ್ಯೂ ಇದು ಎಲ್ಲಾ ಪ್ರಕರಣಗಳಲ್ಲಿ ಹೀಗೆ ಆಗಿರುವುದಿಲ್ಲ. ಸತ್ಯವೇದದಲ್ಲಿ ಹಾಗರಳ ಉದಾಹರಣೆಯಲ್ಲಿ ಆಕೆಯು ಮಗುವನ್ನು ಹೆರುವುದಕ್ಕೆ ಒತ್ತಾಯಿಸಲ್ಪಟ್ಟು ಹೆತ್ತಮೇಲೆ ಆಕೆಯನ್ನು ಅವಳ ಮಗುವಿನೊಂದಿಗೆ ಹೊರಹೋಗುವಂತೆ ಬಲವಂತ ಪಡಿಸಲಾಗುತ್ತದೆ. ಆ.ಕಾಂಡ 16:3–4 ಮತ್ತು 21:17. ಎಲೀಯನು ವಿಧವೆಯೊಬ್ಬಳನ್ನು ಪರಾಂಬರಿಸುವುದಕ್ಕೆ (ಆಕೆಯು ಒಂಟಿಯಾಗಿ ತನ್ನ ಮಗನನ್ನು ಸಾಕುತ್ತಿದ್ದಳು). ಸೆರಪ್ತಾ ಎಂಬ ಹಳ್ಳಿಗೆ ಕಳುಹಿಸಲ್ಪಟ್ಟನು (1 ಅರಸು 17:9).

ಯೇಸುಕ್ರಿಸ್ತನು ತನ್ನ ಸೇವೆಯನ್ನು ಆರಂಭಿಸುವ ಹೊತ್ತಿಗೆ ಹೆತ್ತ ತಾಯಿಯಾದ ಮರಿಯಳು ಗಂಡನನ್ನು ಕಳೆದುಕೊಂಡು (ಯೋಸೇಫ) ವಿಧವೆಯಾಗಿದ್ದಳು. ಯೇಸುವನ್ನು ಪವಿತ್ರಾತ್ಮನಿಂದ ಹೆತ್ತ ರಹಸ್ಯವನ್ನು ತನ್ನನ್ನು ಮದುವೆಯಾದ ಯೋಸೇಫನಿಗೆ ಮಾತ್ರ ಹಂಚಿಕೊಂಡಿದ್ದವಳು. ಮರಣವು ಆಕೆಯನ್ನು ಯೋಸೇಫನಿಂದ ಬೇರ್ಪಡಿಸಿತ್ತು. ಈವಾಗ ತನ್ನ ಭಯ ನಿರೀಕ್ಷೆಗಳನ್ನು ಹೇಳಿಕೊಳ್ಳುವುದಕ್ಕೆ ಯಾರೂ ಇರಲಿಲ್ಲ. ಹಾಗೆ ಕಳೆದ ಎರಡು ತಿಂಗಳುಗಳು ದುಃಖಕರವಾಗಿತ್ತು. ಎಲೆನ್ ಜಿ ವೈಟಮ್ಮನ 'ದಿ ಡಿಸೈರ್ ಆಫ್ ಏಜಸ್' ಪುಸ್ತಕದಲ್ಲಿ ಪುಟ 145.

ತಾಯಿಯಿಲ್ಲದ ಮಗುವನ್ನು ಸಾಕುವ ಜವಾಬ್ದಾರಿಯುಳ್ಳ ತಂದೆಯಾಗಲೀ ಅಥವಾ ತಂದೆ ಇಲ್ಲದ ಮಗುವನ್ನು ಸಾಕುವ ಜವಾಬ್ದಾರಿಯುಳ್ಳ ತಾಯಿಯಾಗಲೀ/ ಮತ್ಯಾರು ನಿರ್ವಹಿಸಲಾಗದ ಬಹಳ ದೊಡ್ಡ ಸವಾಲಿನ ಕರ್ತವ್ಯವನ್ನು ಏಕಾಂಗಿಯಾಗಿ ನಿರ್ವಹಿಸುತ್ತಿರುತ್ತಾರೆ. ಅನೇಕರು ಹಣಕಾಸಿನ ನಿರ್ವಹಣೆ ಇಲ್ಲವೆ ಜೀವನ ಸಂಗಾತಿಯೊಡನೆ ಏಗುವಿಕೆ, ಕೇವಲ ತಮಗೆ ಮಾತ್ರ ಇಲ್ಲವೆ ದೇವರೊಂದಿಗೆ ಕಳೆಯುವುದಕ್ಕೆ ಮಾತ್ರ ಸಮಯವಿರುವವರು ಕಷ್ಟಗಳನ್ನು ಎದುರಿಸುತ್ತಿರುತ್ತಾರೆ ಮತ್ತೆ ಇನ್ನೆಂದಿಗೂ ತಾವು ಪ್ರೀತಿಸಲ್ಪಡಲಾರವೇನೋ ಎಂಬುದಾಗಿ ಆಶ್ಚರ್ಯಪಡುತ್ತಿರುತ್ತಾರೆ.

ಯಾರೇ ಆಗಲಿ, ಮಗುವನ್ನು ಒಂಟಿಯಾಗಿ ಸಾಕುತ್ತಿರುವ ತಂದೆಯಾಗಲಿ ಇಲ್ಲವೆ ತಾಯಿಯಾಗಲಿ ಈ ಕೆಳಗಿನ ವಾಕ್ಯಗಳಿಂದ ಯಾವ ವಾಗ್ದಾನವನ್ನು ಪಡೆಯಬಹುದು? ಯೆರೆ 31:25; ಮತ್ತಾ 11:28; ಯೆರೆ 29:11 ಮತ್ತು 32:27; ಜ್ಞಾ 3:5,6; ಯೆಶಾ 43:1,2.

ಸಭೆಯಾಗಿ ನಮಗೆ ಮಕ್ಕಳನ್ನು ಒಂಟಿಯಾಗಿ ಸಾಕುತ್ತಿರುವ ತಂದೆಗೆ ಇಲ್ಲವೆ ತಾಯಿಗೆ ಸಹಾಯ ಮಾಡುವ ಯಾವ ಜವಾಬ್ದಾರಿಯನ್ನು ಹೊಂದಿದ್ದೇವೆ. ಯಾಕೋಬನು ತನ್ನ ಪತ್ರಿಕೆಯಲ್ಲಿ ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಮರಿಸಿ ತನಗೆ ಪ್ರಪಂಚದ ದೋಷವು ಹತ್ತದಂತೆ ನೋಡಿಕೊಂಡಿರುವುದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ ಎಂದು ಹೇಳುತ್ತಾನೆ (ಯಾಕೋಬ 1:27). ಒಬ್ಬನು ಇಂತಹ ಸಂದರ್ಭಗಳಲ್ಲಿ ಅವರ ತೊಂದರೆಗಳನ್ನು ಇನ್ನೂ ಹೆಚ್ಚಿಸಬಹುದು. ನಾವು ಅಂಥವರಿಗೆ ಮಾಡುವ ಸಹಾಯ ಹಣಕಾಸಿನದೇ ಆಗಿರಬೇಕಿಲ್ಲ. ಸ್ವಲ್ಪಹೊತ್ತು ಮಕ್ಕಳನ್ನು ನೋಡಿಕೊಂಡರೆ ಅವರಿಗೆ ಸ್ವಲ್ಪ ಬಿಡುವು ಸಿಕ್ಕಿದಂತಾಗುತ್ತದೆ. ಇಲ್ಲವೇ ಇತರೆ ಕೆಲಸಗಳನ್ನು ಮಾಡಿಬಿಟ್ಟು ದೇವರ ವಾಕ್ಯವನ್ನು ಓದುವುದಕ್ಕೆ ಮತ್ತು ಪ್ರಾರ್ಥಿಸುವುದಕ್ಕೆ ಸಾಧ್ಯವಾಗುತ್ತದೆ. ನಾವು ಮಕ್ಕಳಿಗೆ ಮಾರ್ಗದರ್ಶಕರಂತೆ ಸಹಾಯ ಮಾಡಬಹುದು. ಇಲ್ಲವೇ ಮನೆಯಲ್ಲಿ ಏನಾದರೂ ರಿಪೇರಿ ಕೆಲಸಗಳನ್ನಾದರೂ ಮಾಡಿಕೊಡಬಹುದು. ನಾವು ಅಂತಹ ಒಂಟಿಯಾದ ವ್ಯಕ್ತಿಗೆ ಅನೇಕ ರೀತಿಯಲ್ಲಿ ಸಹಾಯ ಮಾಡುವಲ್ಲಿ ದೇವರ ಕೈಗಳಾಗಿರಬೇಕು.

ಅವರು ಈ ಪರಿಸ್ಥಿತಿಗೆ ಹೇಗೆ ಬಂದರು ಎಂಬುದಾಗಿ ಒಂಟಿ ಪೋಷಕರ ಮೇಲೆ ಯಾವುದೇ ತೀರ್ಪನು ಮಾಡದೆ ಯಾವ ನಿರ್ಧಿಷ್ಟವಾದ ಸಹಾಯವನ್ನು ಮತ್ತು ಪ್ರೋತ್ಸಾಹವನ್ನು ಅವರಿಗೆ ಮಾಡಬಹುದು?

**ಮಂಗಳವಾರ** **ಮೇ 21**

## ಮಕ್ಕಳನ್ನು ಸಾಕುವ ಜವಾಬ್ದಾರಿಯಲ್ಲಿ ಇರುವ ಆನಂದ

ಕೀರ್ತನೆ 127ನ್ನು ಓದಿರಿ. ಈ ಚಿಕ್ಕ ಕೀರ್ತನೆಯಲ್ಲಿರುವ ಸಂದೇಶವೇನು? ನಾವು ಹೇಗೆ ಜೀವಿಸಬೇಕು ಎಂಬುದಕ್ಕೆ ಈ ಕೀರ್ತನೆಯಲ್ಲಿ ಯಾವ ತತ್ವವನ್ನು ನಮಗಾಗಿ ತೆಗೆದುಕೊಳ್ಳಬೇಕು? ನಿಮಗೆ ಇಷ್ಟವಾದ ತಿನಿಸೊಂದನ್ನು ತಯಾರಿಸಲು ಒಂದು ಕ್ರಮವನ್ನು ಅನುಸರಿಸಬೇಕು. ನೀವು ಅದಕ್ಕೆ ಬೇಕಾದ ಎಲ್ಲಾ ಪರಿಕರಗಳನ್ನು ಸೇರಿಸಿ ಎಲ್ಲಾ ಹಂತಗಳನ್ನು ಅನುಸರಿಸಿದಾಗ ಹೆಚ್ಚಿನ ಸಂದರ್ಭಗಳಲ್ಲಿ ನಿಮಗೆ ಮೆಚ್ಚಿಗೆಯಾಗುವ ಫಲಿತಾಂಶಗಳೇ ಸಿಗುತ್ತವೆ.

ಮಕ್ಕಳನ್ನು ಪಾಲನೆ ಮಾಡುವುದು ಅಡುಗೆ ಮಾಡಿದ ಹಾಗಲ್ಲ. ಯಾವ ಒಂದು ಮಗುವೂ ಇನ್ನೊಂದು ಮಗುವಿನಂತಿರುವುದಿಲ್ಲ. ಒಂದು ಮಗುವಿಗೆ ಏನೆಲ್ಲಾ ಮಾಡುತ್ತೀರೋ ಅದನ್ನೇ ಇನ್ನೊಂದು ಮಗುವಿಗೂ ಮಾಡಿದಾಗ್ಯೂ ಎರಡೂ ಒಂದೇ ರೀತಿಯಾಗಿರುವುದಿಲ್ಲ. ಎರಡೂ ಒಂದಕ್ಕೊಂದು ಭಿನ್ನವಾಗಿ ಪರಿಣಮಿಸಬಹುದು. ಇದು ಅವರ ಲಿಂಗಕ್ಕೆ ಸಂಬಂಧಿಸಿದುದಾಗಿರಬಹುದು, ಅವರು ಹುಟ್ಟಿದ ಕ್ರಮ ಅವರ ಗುಣಸ್ವಭಾವಗಳು ಇಲ್ಲವೇ ಇನ್ನಿತರ ಅನೇಕ ಕಾರಣಗಳಿರಬಹುದು! ದೇವರ ಯೋಜನೆಯಂತೆ ಹೆತ್ತವರು ತಮ್ಮ ಮಕ್ಕಳಿಗೆ ಪ್ರೀತಿಸುವ ಹಾಗೆ ಮತ್ತು ವಿಧೇಯರಾಗುವ ಹಾಗೆ ಬೋಧಿಸಿ ನಡೆಸಬೇಕು (ಧರ್ಮ 6:4–9, ಕೀರ್ತ 78:5–7).

ದೇವರಿಂದ ಹೆತ್ತವರಿಗೆ ಇರುವ ನಿರ್ದೇಶನವೇನೆಂದರೆ ಅವರು ಮಕ್ಕಳನ್ನು ನಡೆಯಬೇಕಾದ ಮಾರ್ಗದಲ್ಲಿ ನಡೆಯುವಂತೆ ತರಬೇತು ಮಾಡಬೇಕು (ಜ್ಞಾನೋಕ್ತಿ 22:6). ತಮ್ಮ ಮಕ್ಕಳು ಯಾವುದೇ ತಪ್ಪಾದ ತೀರ್ಮಾನಗಳನ್ನು ತೆಗೆದುಕೊಳ್ಳದ ಹಾಗೆ ಖಾತ್ರಿ ಮಾಡಿಕೊಳ್ಳಲು ಯಾವಾಗಲೂ ಅವರೊಂದಿಗೆ ಇರುವ ಅಗತ್ಯವಿಲ್ಲ.

ನಮ್ಮ ಮಕ್ಕಳು ಮುದ್ದು ಮುದ್ದು ಪುಟಾಣಿಗಳು ಅಸಹಾಯಕ ಸ್ಥಿತಿಯಿಂದ ದೊಡ್ಡವರಾಗಿ ಯಶಸ್ಸು ಪಡೆದು ಸ್ವಾತಂತ್ರ್ಯರಾಗಿರುವುದನ್ನು ನೋಡಲು ಬಯಸುವ ಸಮಯದಲ್ಲಿ ಅವರು ಯೇಸುಕ್ರಿಸ್ತನನನ್ನು ಪ್ರೀತಿಸಿ ಅವನ ಸೇವೆ ಮಾಡುವವರನ್ನಾಗಿ ಮಾಡುವುದೇ ನಮ್ಮ ಅಂತಿಮ ಜವಾಬ್ದಾರಿಯಾಗಿದೆ. ನಾವು ನಮ್ಮ ಮಕ್ಕಳ ಪಾಲಕರಾಗಿ ಧರ್ಮೋಪದೇಶಕಾಂಡದ 6ನೇ ಅಧ್ಯಾಯವು ಅವರು ಆತ್ಮೀಕ ಜೀವನವನ್ನು ಅಭಿವೃದ್ಧಿಪಡಿಸುವ ಯೋಜನೆಯಾಗಿದ್ದು ಅದನ್ನು ಅನುಸರಿಸಬೇಕು. ಒಟ್ಟಾರೆ ನಾಲ್ಕು ಮುಖ್ಯವಾದ ಅಗತ್ಯತೆಗಳು ಇವೆ : "ನಮ್ಮ ದೇವರಾದ ಕರ್ತನು" (ಧ.ಕಾಂಡ 6:4) ಎಂಬುದಾಗಿ ದೇವರನ್ನು ಗುರುತಿಸಬೇಕು. ಇದು ಮೊಟ್ಟ ಮೊದಲನೆ ಅಗತ್ಯತೆ. ಆತನನ್ನು ನಮ್ಮ ಪೂರ್ಣಹೃದಯದಿಂದ ಪ್ರೀತಿಸಬೇಕೆಂಬುದು ಎರಡನೇ ಅಗತ್ಯತೆ (ಧರ್ಮ 6:5). ನಾವು ಆತನ ವಾಕ್ಯವನ್ನು ನಿಧಿಯಂತೆ ಕಾಪಾಡಬೇಕೆಂಬುದು ಮೂರನೇ ಅಗತ್ಯತೆ (ಧ. ಕಾಂಡ 6:6) ಮತ್ತು ಆತನ ಬಗ್ಗೆ ನಮಗೆ ತಿಳಿದಿರುವುದನ್ನು ನಮ್ಮ ಮಕ್ಕಳೊಂದಿಗೆ ಹಂಚಿಕೊಳ್ಳಬೇಕು. ಇದು ನಾಲ್ಕನೇ ಅಗತ್ಯತೆ (ಧ. ಕಾಂಡ 6:20–23). ಮುಂದುವರೆದು ಧರ್ಮೋಪದೇಶಕಾಂಡ 6ನೇ ಅಧ್ಯಾಯವು ಎರಡು ಮುಖ್ಯವಾದ ತತ್ವಗಳನ್ನು ಕೊಡುವಂಥದ್ದಾಗಿದೆ. ಮೊದಲನೆಯದು "ಬೋಧನೆ ಮತ್ತು ಮಾತಿನ" ತತ್ವ ಇದರಲ್ಲಿ ಬೋಧನೆ ಎಂಬುದು ಔಪಚಾರಿಕ ಶಿಕ್ಷಣಕ್ಕೆ ಸಂಬಂಧಿಸಿದೆ ಮತ್ತು ಮಾತು ಅನೌಪಚಾರಿಕವಾದ ಬುದ್ಧಿಮಾತಿಗೆ ಸಂಬಂಧಿಸಿದೆ. ಈ ಎರಡೂ ಸಂದರ್ಭಗಳಲ್ಲಿ ಸತ್ಯವೇದದ ಸತ್ಯವನ್ನು ಹೆತ್ತವರು ಮತ್ತು ಮಕ್ಕಳ ಸಂಬಂಧದ ಪರಿಸರವು ಅರುಹುವಂಥದ್ದಾಗಿದೆ. ಕೌಟುಂಬಿಕ ಆರಾಧನೆಯ ಸಮಯದಲ್ಲಿ ಮಕ್ಕಳೊಂದಿಗೆ ದೇವರ ವಾಕ್ಯವನ್ನು ಕಲಿಯುವಾಗ ಔಪಚಾರಿಕ ಬೋಧನೆಗಳು ಅವರಿಗೆ ಸಿಗುತ್ತವೆ. ಅನೌಪಚಾರಿಕ ಬೋಧನೆಗಳು ದೈನಂದಿನ ಜೀವಿತದ ಸನ್ನಿವೇಶಗಳಲ್ಲಿ ಸಹಜವಾಗಿ ಅವರಿಗೆ ಸಿಗುತ್ತವೆ. ಅವು ಬಹಳ ಮುಖ್ಯವಾದವುಗಳಾಗಿವೆ. ಪ್ರತಿನಿತ್ಯದ ಆಗುಹೋಗುಗಳು (ಘಟನೆಗಳು) ಸತ್ಯವೇದದ ಸತ್ಯಗಳನ್ನು ತಿಳಿಸುವುದರಲ್ಲಿ ಪರಿಣಾಮಕಾರಿಯಾದ ವಾಹನಗಳಾಗಿ ಕೆಲಸ ಮಾಡುತ್ತವೆ (ಆ. ಕಾಂಡ 18:19).

ಎರಡನೆಯ ತತ್ವವು ಬರೆಯುವ–ಕಟ್ಟುವ ತತ್ವವಾಗಿದೆ (ಧ. ಕಾಂಡ 6:8,9). ಆತ್ಮೀಕ ಸತ್ಯವು ನಮ್ಮ ಕ್ರಿಯೆಗಳಲ್ಲಿ (ಕೈಗಳು) ಮತ್ತು ಧೋರಣೆಗಳು (ಹಣೆ) ಕಟ್ಟಲ್ಪಡಬೇಕು. ಆದರೆ ಇವುಗಳನ್ನು ಸ್ವಂತ ಬಾಗಿಲುಗಳ (ನಿಲುವ ಪಟ್ಟಿಯ) ಮೇಲೆ ಸಾರ್ವಜನಿಕರ (ಹೊರ ಬಾಗಿಲುಗಳು) ಮೇಲೆ ಕೆತ್ತಿಸಬೇಕು. ಇವು ನಮ್ಮ ಹೃದಯದಿಂದ ಮನೆಗಳಿಗೂ ಮನೆಗಳಿಂದ ಲೋಕಕ್ಕೂ ಸರಿದು ಬರುವುವುಗಳಾಗಿರಬೇಕು.

**ಬುಧವಾರ** **ಮೇ 22**

## ಮಕ್ಕಳನ್ನು ಶಿಷ್ಯರನ್ನಾಗಿ ಮಾಡುವ ಲಾಲನೆ ಪಾಲನೆ

ಓದಿರಿ ಆದಿಕಾಂಡ 18:18,19 ಮತ್ತು 1 ಸಮುವೇಲ 3:10–14 ಪರಸ್ಪರ ವೈರುದ್ಧಗಳಿರುವ ತಂದೆಗಳು. ಇವರ ಲಾಲನೆ ಪಾಲನೆಯ ಶೈಲಿಯಲ್ಲಿ ಯಾವ ಫಲಿತಾಂಶಗಳನ್ನು ನೋಡಬಹುದು?

ತಮ್ಮ ಮಕ್ಕಳು ಯೇಸುಕ್ರಿಸ್ತನ ಶಿಷ್ಯರಾಗುವಂತೆ ಅವರನ್ನು ಶಿಷ್ಯರನ್ನಾಗಿಸುವ ಜವಾಬ್ದಾರಿಯನ್ನು ತಂದೆ–ತಾಯಿಗಳು ಹೊಂದಿರುತ್ತಾರೆ. ದೈಹಿಕ ಶಿಕ್ಷೆಯು ಮಕ್ಕಳಿಗೆ ಕಲಿಸುವ ಮತ್ತು ತಿದ್ದುವ ವಿಧಾನವೆಂದು ಅನೇಕ ತಂದೆ ತಾಯಿಗಳು ನಂಬಿರುತ್ತಾರೆ. ಶಿಕ್ಷೆಯು ಹೆಚ್ಚಾದಷ್ಟು ಹೆಚ್ಚು ಒಳ್ಳೆಯದು ಎಂದು ಕೊಂಡಿರುತ್ತಾರೆ (ಜ್ಞಾನ 22:15, 23:13, 29:15). ಈ ವಚನಗಳನ್ನು ಉದಾಹರಣೆಯಾಗಿ ಇಟ್ಟುಕೊಂಡು ಮಕ್ಕಳನ್ನು ಶೋಷಣೆ ಮಾಡುತ್ತಾರೆ. ಬಲವಂತದಿಂದ ತಮಗೆ ಮಣಿಯುವಂತೆ ಮಾಡುತ್ತಾರೆ. ಆದರೆ ಅನೇಕ ಸಲ ಮಕ್ಕಳು ಇಂತಹ ಸಂದರ್ಭಗಳಲ್ಲಿ ತಮ್ಮ ತಂದೆ ತಾಯಿಗಳ ಮತ್ತು ದೇವರ ಮೇಲೆ ಎದುರು ಬೀಳುತ್ತಾರೆ.

ಸತ್ಯವೇದವು ತಂದೆ ತಾಯಿಗಳು ತಮ್ಮ ಮಕ್ಕಳನ್ನು ಕರುಣೆಯಿಂದ ನಿಯಂತ್ರಿಸಬೇಕೆಂದು ಹೇಳುತ್ತದೆ (ಎಫೆಸ 6:4, ಕೊಲೊಸ್ಸೆ 3:21) ಮತ್ತು ನೀತಿ ಬೋಧೆಯನ್ನು ಮಾಡಬೇಕೆಂದು ಹೇಳುತ್ತದೆ. (ಕೀರ್ತ 78:5; ಜ್ಞಾನೋಕ್ತಿ 22:6; ಯೆಶಾ 38:19, ಯೋವೇಲ 1:3).

ತಂದೆ-ತಾಯಿಗಳಾಗಿ ನಾವು ನಮ್ಮ ಮಕ್ಕಳಿಗೆ ಬೇಕಾದದ್ದನ್ನು ಒದಗಿಸುವವರಾಗಿರಬೇಕು (2 ಕೊರಿಂಥ 12:14) ಮತ್ತು ಅವರು ನಮ್ಮನ್ನು ಅನುಸರಿಸುವಂತೆ ನಾವು ಅವರಿಗೆ ಒಳ್ಳೆಯ ಉದಾಹರಣೆಯಾಗಿರಬೇಕು (ಆ.ಕಾಂಡ 18:19; ವಿ.ಕಾಂಡ 13:8, ತೀತ 2:2). ನಾವು ನಮ್ಮ ಮನೆಯವರನ್ನು ಚೆನ್ನಾಗಿ ನಡೆಸುವವರಾಗಿರಬೇಕೆಂದು ಹೇಳಲ್ಪಟ್ಟಿದ್ದೇವೆ (1 ತಿಮೊ 3:4,5,12) ಮತ್ತು ನಮ್ಮ ಮಕ್ಕಳನ್ನು ಶಿಸ್ತುಪಡಿಸಬೇಕು (ಜ್ಞಾ 29:15, 17). ಹೀಗೆ ಮಾಡುವಾಗ ದೇವರ ಪ್ರೀತಿಯನ್ನು ಪ್ರತಿಬಿಂಬಿಸಬೇಕು (ಯೆಶಾ 66:13, ಕೀರ್ತ 103:13, ಲೂಕ 11:11).

ಅನೇಕ ತಂದೆ ತಾಯಿಗಳು ತಪ್ಪಾಗಿ ವರ್ತಿಸಿದ ಕಥೆಗಳನ್ನು ಸತ್ಯವೇದದಲ್ಲಿ ನೋಡುವುದು ದುಃಖಕರವಾಗಿರುತ್ತದೆ. ಇಸಾಕನೂ ಅವನ ಹೆಂಡಾತಿ ರೆಬೆಕ್ಕಳೂ ತಮ್ಮ ಮಕ್ಕಳಾದ ಏಸಾವ ಮತ್ತು ಯಾಕೋಬರ ನಡುವೆ ಪಕ್ಷಪಾತ ಮಾಡಿದ್ದನ್ನು ನೋಡಬಹುದು (ಆದಿಕಾಂಡ 25:28). ನಂತರ ಯಾಕೋಬನು ಇದೇ ಧೋರಣೆಯನ್ನು ತನ್ನ ಮಕ್ಕಳಲ್ಲಿ ತಿದ್ದುವುದರಲ್ಲಿ ವಿಫಲನಾದನು (1 ಸಮು 3:10–14). ಏಲಿಯ ಸಮ್ಮುಖದಲ್ಲಿ ಬೆಳೆದ ಸಮುವೇಲನು ಸಹ ತನ್ನ ಮಕ್ಕಳ ವಿಷಯದಲ್ಲಿ ವಿಫಲನಾದ ತಂದೆಯಾದನು (1 ಸಮು 8:1–6). ಅರಸನಾದ ದಾವೀದನು ವ್ಯಭಿಚಾರ ಮಾಡಿ ಕೊಲೆಗೆ ಆಜ್ಞಾಪಿಸಿದುದರಿಂದ ತನ್ನ ಮಕ್ಕಳಿಗೆ ತನ್ನ ಕೆಟ್ಟ ಉದಾಹರಣೆಯನ್ನು ಅನುಸರಿಸುವಂತೆ ಕೊಟ್ಟನು. ಅರಸನಾದ ಮನಸ್ಸೆಯು ತನ್ನ ಮಕ್ಕಳನ್ನು ದೆವ್ವಗಳಿಗೆ ಬಲಿಗೊಟ್ಟನು (2 ಅರಸುಗಳು 21:1–9). ಹಾಗೆಯೇ ಅರಸನಾದ ಅಹಾಜನು ಸಹ ಮಾಡಿದನು (2 ಅರಸು 16:2–4). ಹೀಗಾದರೂ ಸುದೈವದಿಂದ ನಾವು ದೈವವಾಕ್ಯದಲ್ಲಿ ಉತ್ತಮ ಪಾಲಕರ ಉದಾಹರಣೆಯನ್ನು ನೋಡುತ್ತೇವೆ. ಎಸ್ತೇರಳನ್ನು (ಹದಸ್ಸಾ) ಅವಳ ಚಿಕ್ಕಪ್ಪ ಮೊರ್ದೆಕೈ ಒಳ್ಳೆಯ ಸಾಕು ತಂದೆಯಾಗಿ ಬೆಳೆಸಿದುದನ್ನು ನೋಡುತ್ತೇವೆ (ಎಸ್ತರಳು 2:7) ಮತ್ತು ಯೋಬನು ತನ್ನ ಮಕ್ಕಳಿಗಾಗಿ ಎಡಬಿಡದೆ ನಿಯಮಿತವಾಗಿ ಪ್ರಾರ್ಥಿಸುತ್ತಿದ್ದನು (ಯೋಬ 1:4–5). ಈ ಎಲ್ಲಾ ಒಳ್ಳೆಯ ಮತ್ತು ಕೆಟ್ಟ ಉದಾಹರಣೆಗಳಲ್ಲಿ ತಂದೆ ತಾಯಿಗಳ ಬಗ್ಗೆ ಪಾಠ ಕಲಿತುಕೊಳ್ಳಬಹುದು.

ಸತ್ಯವೇದದಲ್ಲಿ ಮಕ್ಕಳನ್ನು ಸಾಕಿ ಸಲುಹುವ ತಂದೆ ತಾಯಿಗಳ ಉದಾಹರಣೆಯಿಂದ ನಾವು ಏನನ್ನು ಕಲಿಯಬಹುದು? ನಾವು ಇಲ್ಲಿರುವ ನಿಯಮಗಳನ್ನು ನಮ್ಮ ಮಕ್ಕಳಲ್ಲದವರ ಜೊತೆ ಯಾವ ರೀತಿಯಲ್ಲಿ ಚರ್ಚಿಸಬಹುದು?

**ಗುರುವಾರ** **ಮೇ 23**

## ತಪ್ಪಿಹೋದ ನಿಮ್ಮ ಮಗುವಿಗಾಗಿ ನೀವು ನಡೆಸುವ ಹೋರಾಟ

ಓದಿರಿ : ಜ್ಞಾ 22:6, ಈ ವಚನಗಳ ಬಗ್ಗೆ ನಿಮಗಿರುವ ಅರಿವೇನು? ಇದು ಒಂದು ನಿಶ್ಚಯವೇ, ಒಂದು ವಾಗ್ದಾನವೇ, ಅಥವಾ ಒಂದು ಸಂಭಾವ್ಯವೇ?

ನೀವು ತಂದೆ ತಾಯಿಗಳಾಗಿ ನಿಮ್ಮ ಮಕ್ಕಳಿಗೆ ಮಾಡಬೇಕಾದ್ದೆಲ್ಲವನ್ನೂ ಮಾಡುತ್ತೀರಿ. ಒಳ್ಳೆಯವುಗಳನ್ನು ಕಲಿಸಲು ಸಮಯವನ್ನು ಕಳೆಯುತ್ತೀರಿ, ದೈವ ಜ್ಞಾನಾನುಸಾರ ಜೀವಿಸುವಂತೆ ಮಾಡುತ್ತೀರಿ, ನಿಯಮಿತವಾಗಿ ಸಭೆಗೆ ಹೋಗಿ ಮಕ್ಕಳನ್ನು ಧರ್ಮಪ್ರಚಾರ ಕಾರ್ಯದಲ್ಲಿ ತೊಡಗಿಸುತ್ತೀರಿ. ಕಡೆಗೆ ಅವರು ಯಾವ ನಂಬಿಕೆಯಲ್ಲಿ ಬೆಳೆದು ಬಂದರೋ ಅದನ್ನೇ ಬಿಟ್ಟುಬಿಡುತ್ತಾರೆ. ಅವರ ರಕ್ಷಣೆಯ ಕಾಳಜಿಯನ್ನು ಹೊಂದಿದವರಾದ ನಮಗೆ ನಮ್ಮ ನೋವು ಯಾತನಮಯವಾಗಿರುತ್ತದೆ. ಇದಕ್ಕೆ ಕಾರಣ ಹೆತ್ತವರೇ ಆಗಿರಬೇಕಾದ ಅಗತ್ಯವಿಲ್ಲ. ಮಕ್ಕಳಿಗೂ ಸಹ ತಮ್ಮದೇ ಆದ ಮನಸ್ಸಿರುತ್ತದೆ. ಕಡೆಯದಾಗಿ ತಮ್ಮ ಕ್ರಿಯೆಗಳಿಗೆ ತಾವೇ ದೇವರಿಗೆ ಜವಾಬ್ದಾರರಾಗಿರುತ್ತಾರೆ. ಉತ್ತಮವಾದ ಪೋಷಕತ್ವದಿಂದ ಯಾವಾಗಲೂ ಮಕ್ಕಳ ರಕ್ಷಣೆ ನಿಶ್ಚಯವೆಂದು ನಡೆಯಬೇಕಾದ ಮಾರ್ಗಕ್ಕೆ ತಕ್ಕಂತೆ ಹುಡುಗನನ್ನು ಶಿಕ್ಷಿಸು; ಮುಪ್ಪಿನಲ್ಲಿಯೂ ಓರೆಯಾಗನು ಎಂಬ ವಚನವನ್ನು ವಾಗ್ದಾನವಾಗಿಯೂ ಸ್ವೀಕರಿಸುತ್ತೇವೆ. ಆದರೆ ಜ್ಞಾನೋಕ್ತಿಗಳು ನಮಗೆ ಯಾವಾಗಲೂ ನಿಬಂಧನೆರಹಿತವಾದ ವಾಗ್ದಾನಗಳನ್ನು ಕೊಡದೆ ಅನೇಕ ಸಲ ಮೂಲತತ್ವವನ್ನು ನೀಡುವಂಥದ್ದಾಗಿದೆ. ಈ ಪಠ್ಯಗಳಿಂದ ನಾವು ಪಡೆದುಕೊಳ್ಳುವ ಆಶ್ವಾಸನೆ ಏನೆಂದರೆ ಮಕ್ಕಳು ಚಿಕ್ಕವರಾಗಿದ್ದಾಗ ಕಲಿತ ಪಾಠಗಳು ಜೀವನದುದ್ದಕ್ಕೂ ಉಳಿಯುತ್ತವೆ ಎಂಬುದೆ. ಪ್ರತಿ ಮಗುವು ತಂದೆ ತಾಯಿಯರ ಪಾರುಪತ್ಯವನ್ನು ತಮ್ಮದೇ ಎಂಬುದಾಗಿ ಒಪ್ಪಿಕೊಳ್ಳುವ ಇಲ್ಲವೇ ತಿರಸ್ಕಾರ

ಮಾಡುವ ವಯಸ್ಸನ್ನು ಮುಟ್ಟುತ್ತದೆ. ಯಾವ ತಂದೆ ತಾಯಿಗಳು ತಮ್ಮ ಮಕ್ಕಳಿಗೆ ದೈವೀಕ ತರಬೇತನ್ನು ಕೊಡುವುದಕ್ಕೆ ಎಚ್ಚರ ವಹಿಸುತ್ತಾರೋ ಅವರು ತಮ್ಮ ಮಕ್ಕಳು ಕಲಿತದ್ದು ಎಂದೆಂದಿಗೂ ಅವರೊಂದಿಗೆ ಇರುತ್ತದೆ ಎಂಬ ಆಶ್ವಾಸನೆ ಇಟ್ಟುಕೊಂಡಿರುತ್ತಾರೆ.

ಒಂದು ವೇಳೆ ಮಕ್ಕಳು ಮಾರ್ಗ ಬಿಟ್ಟು ಹೊರ ನಡೆದಾಗ ತಂದೆ ತಾಯಿಗಳು ಅವರ ಹೃದಯದಲ್ಲಿ ಬಿತ್ತಿದ ಬೀಜವು ಅವರನ್ನು ಮತ್ತೆ ಮನೆಯ ಕಡೆಗೆ ಕರೆಯುವ ಕೆಲಸವನು ಮುಂದುವರೆಸುತ್ತದೆ. ಒಳ್ಳೆಯ ತಂದೆ ತಾಯಿಗಳಾಗಿರುವುದು ನಮ್ಮ ಆಯ್ಕೆಯಾಗಿರುತ್ತದೆ.

ಮಗುವು ದಾರಿ ತಪ್ಪಿ ನಡೆಯುವಾಗ ಹೆತ್ತವರು ಏನನ್ನು ಮಾಡಬೇಕು? ನಿಮ್ಮ ಮಕ್ಕಳು ದೇವರ ಕಡೆಗೆ ತಿರುಗಿಕೊಳ್ಳುವಂತೆ ಶ್ರದ್ಧೆಯಿಂದ ಪ್ರಾರ್ಥಿಸಿರಿ. ನಮ್ಮ ನೋವನ್ನು ಅರ್ಥಮಾಡಿಕೊಳ್ಳುವರಿದ್ದಾರೆ ಎಂದರೆ ಅದು ದೇವರು ಮಾತ್ರ. ಕೋಟ್ಯಾನುಕೋಟಿ ಮಕ್ಕಳು ನಮ್ಮ ಬೆನ್ನನ್ನು ದೇವರ ಕಡೆಗೆ ತಿರುಗಿಸುತ್ತಾರೆ. ದೇವರು ಪರಿಪೂರ್ಣ ಪೋಷಕನಾಗಿರುತ್ತಾನೆ. ನೀವು, ನಿಮ್ಮ ಮಕ್ಕಳು ದೇವರ ವಿರುದ್ಧವಾಗಿ ಸೆಣಸಾಡುವಾಗ ಪ್ರೀತಿ ಮತ್ತು ಪ್ರಾರ್ಥನೆಗಳಿಂದ ಅವರಿಗೆ ಅಗತ್ಯವಾದ ಬೆಂಬಲವನ್ನು ಕೊಡುತ್ತಾ ಅವರೊಂದಿಗೆ ನಿಂತುಕೊಳ್ಳಬಹುದು.

ನೀವು ಮಕ್ಕಳಿಗೆ ಅಗತ್ಯವಾದ ಒತ್ತಾಸೆ ಮತ್ತು ಪ್ರಾರ್ಥನೆ ನೀಡಲು ಮುಜುಗರ ಪಟ್ಟುಕೊಳ್ಳಬೇಡಿರಿ. ನೀವು ನಿಮ್ಮನ್ನು ಅಳಿದುಕೊಳ್ಳಬೇಡಿರಿ. ಕುಟುಂಬದಲ್ಲಿ ಇನ್ನಿತರರನ್ನು ಮರೆತು ಯಾವಾಗಲೂ ನಿಮ್ಮ ಗಮನವನ್ನು ತಪ್ಪಿಹೋದ ಮಗನ/ ಮಗಳ ಮೇಲೆಯೇ ಹರಿಸಬೇಡಿರಿ. ತಪ್ಪಿಹೋದ ಮಗುವನ್ನು ಸಾಕಿ ಸಲುಹುವಾಗ ಅದು ಕುಟುಂಬವನ್ನೇ ಒಡೆಯಬಹುದು. ಆವಾಗ ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಒಂದುಗೂಡಿ ನಿಲ್ಲಿರಿ ಮತ್ತು ಸ್ಪಷ್ಟವಾದ ಗಡಿಯನ್ನು (ಪರಿಮಿತಿಯನ್ನು) ಮಗುವಿಗೆ ಹಾಕಿರಿ. ನಿಮ್ಮ ಮಗುವನ್ನು ದೇವರು ನಿಮಗಿಂತಲೂ ಹೆಚ್ಚಾಗಿ ಪ್ರೀತಿಸುತ್ತಾನೆಂಬುದನ್ನು ಜ್ಞಾಪಿಸಿಕೊಳ್ಳಿರಿ. ಅದರ ಒಂದು ಪ್ರಕಾಶಮಾನವಾದ ಭವಿಷ್ಯವನ್ನು ನೋಡಿರಿ ಮತ್ತು ನಿಮ್ಮ ಮಗುವು ದೇವರ ಪ್ರಗತಿಯಲ್ಲಿರುವ ಕೆಲಸವಾಗಿದೆ ಎಂಬುದನ್ನು ಒಪ್ಪಿಕೊಳ್ಳಿರಿ.

ಇಂತಹ ಸಂದರ್ಭಗಳಲ್ಲಿ ನಿಮ್ಮನ್ನು ನೀವೇ ನಿಂದಿಸಿಕೊಳ್ಳುವುದು ಸಹಜವಾಗಿದೆ. ನೀವು ತಪ್ಪುಗಳನ್ನು ಮಾಡಿದ್ದಾಗ್ಯೂ ದೇವರ ವಾಗ್ದಾನಗಳ ಕಡೆಗೆ ಮತ್ತು ಭವಿಷ್ಯದ ಕಡೆಗೆ ನಿಮ್ಮ ಗಮನವನ್ನು ಹರಿಸುವುದು ಉತ್ತಮವಾದುದು ಯಾಕೆ? ಫಿಲಿಪ್ಪಿ 3:13ನ್ನು ನೋಡಿರಿ.

**ಶುಕ್ರವಾರ** **ಮೇ 24**

**ಹೆಚ್ಚಿನ ಚಿಂತನೆ :** ನೀವು ನಿಮ್ಮ ಚಿಕ್ಕ ಮಕ್ಕಳೊಂದಿಗೆ ಪ್ರಾರ್ಥಿಸುವುದಕ್ಕೂ ಮಾತನಾಡುವುದಕ್ಕೂ ಸಮಯವನ್ನು ತೆಗೆದುಕೊಳ್ಳಬೇಕು. ನೀವು ದೇವರೊಟ್ಟಿಗೆ ಮತ್ತು ಮಕ್ಕಳೊಟ್ಟಿಗೆ ಸಂಸರ್ಗದಲ್ಲಿರುವ ಸಂದರ್ಭಗಳಲ್ಲಿ ಯಾವ ಅಡ್ಡಿಯೂ ಆಗದ ಹಾಗೆ ನೋಡಿಕೊಳ್ಳಬೇಕು. ನಿಮ್ಮನ್ನು ಭೇಟಿ ಮಾಡಲು ಬಂದಿರುವ ಸಂದರ್ಶಕರಿಗೆ "ದೇವರು ನನಗೆ ಮಾಡುವುದಕ್ಕೆಂದು ಒಂದು ಕೆಲಸವನ್ನು ಕೊಟ್ಟಿದ್ದಾನೆ. ಆದುದರಿಂದ ಯಾವುದೇ ಗಾಳಿಸುದ್ದಿಯನ್ನು ಹರಡುವುದಕ್ಕೆ ನನಗೆ ಸಮಯವಿಲ್ಲ" ಎಂದು ಹೇಳಬೇಕು. ಈ ಕಾಲಕ್ಕೂ ಮುಂದಿನ ನಿತ್ಯಕಾಲಕ್ಕೂ ನಿಮಗೆ ಮಾಡುವುದಕ್ಕೆ ಕೆಲಸ ಬಂದಿದೆ ಎಂದು ಭಾವಿಸಬೇಕು. ನಿಮ್ಮ ಪ್ರಥಮ ಕರ್ತವ್ಯದಲ್ಲಿ ನಿಮ್ಮ ಮಕ್ಕಳಿಗೆ ಆದ್ಯತೆ ನೀಡುವವವರಾಗಿರಬೇಕು. ಎಲೆನ್ ಜಿ ವೈಟ್‌ರವರ ಪುಸ್ತಕ "ದಿ ಅಡ್ವೆಂಟಿಸ್ಟ್ ಹೋಮ್, ಪುಟ 266, 267.

ಪೋಷಕರೇ ನೀವು ನಿಮ್ಮ ಮಕ್ಕಳು ಇನ್ನೂ ಕೈಗೂಸುಗಳಾಗಿರುವಾಗಲೇ ಶಿಸ್ತಿನ ಪ್ರಥಮ ಪಾಠವನ್ನು ಆರಂಭಿಸಬೇಕು. ಅವರು ತಮ್ಮ ಚಿತ್ತವನ್ನು ನಿಮ್ಮ ಚಿತ್ತಕ್ಕೆ ಒಳಪಡಿಸುವಂತೆ ಕಲಿಸಬೇಕು. ನೀವು ಸ್ಥಿರತೆಯನ್ನು ತೋರಿಸಿ ಸರಿಪಡಿಸುವ ಕೈಗಳಿಂದ ಇದನ್ನು ಸಾಧಿಸಬಹುದು. ಪೋಷಕರು ತಮ್ಮ ಮನಸ್ಸುಗಳ ಮೇಲೆ ಪರಿಪೂರ್ಣವಾದ ನಿಯಂತ್ರಣವನ್ನು ಹೊಂದಿರಬೇಕು. ಪೋಷಕರು ತಮ್ಮ ಮಕ್ಕಳು ಬೇರೇನು ಮಾಡದೆ ತಂದೆ ತಾಯಿಗಳ ಇಚ್ಛಾನುಸಾರ ಮಾತ್ರವೇ ನಡೆದುಕೊಳ್ಳುವವರೆಗೆ ಅವರ ಮನಸ್ಸನ್ನು ಸೌಮ್ಯತೆಯಿಂದ ದೃಢವಾಗಿ ಬಗ್ಗಿಸಬೇಕು. ಅವರು ಅದನ್ನು ಯಾವಾಗಲೋ ಒಮ್ಮೆ ಮಾಡದೆ ಸದಾ ಮಾಡುವವರಾಗಿರಬೇಕು. ಅವರ ಸ್ವಭಾವವನ್ನು ಆರಂಭದಲ್ಲಿಯೇ ಹತ್ತಿಕ್ಕದೇ ಹೋದರೆ ಮೊಂಡರಾಗಿ ಬೆಳೆಯುತ್ತಾರೆ. ಅವರು ಬೆಳದಂತೆ ಅದು ಕೂಡ

ಬಲಯುತವಾಗಿ ಬೆಳೆಯುತ್ತದೆ. ಎಲೆನ್ ಜಿ ವೈಟ್‌ರವರ ಪುಸ್ತಕ "ಟೆಸ್ಟಿಮೋನಿಸ್ ಫಾರ್ ದಿ ಚರ್ಚ್" ಸಂಪುಟ 1, ಪುಟ 218.

## ಚರ್ಚಿಸಬೇಕಾದ ಪ್ರಶ್ನೆಗಳು

1. "ದೇವರ ಮಗು" ಎಂದರೆ ಏನು ಅರ್ಥ? ಆ ಹೋಲಿಕೆಯನ್ನು ನಾವು ಹೇಗೆ ಅರ್ಥಮಾಡಿಕೊಳ್ಳಬಹುದು ಮತ್ತು ಇದರಿಂದ ಯಾವ ಆದರಣೆಯನ್ನು ಪಡೆಯಬಹುದು?

2. ಒಬ್ಬ ತಂದೆಯು ತನಗೆ ಮಕ್ಕಳು ಹುಟ್ಟಿದ ಬಳಿಕ ಈ ಕೆಳಗಿನಂತೆ ಅನ್ನುತ್ತಾನೆ "ನನ್ನ ಮಕ್ಕಳು ಹುಟ್ಟಿದ ಕೆಲವು ವರ್ಷಗಳೊಳಗೆ ಎರಡು ತಾತ್ವಿಕ ಸತ್ಯಗಳನ್ನು ಕಲಿತುಕೊಂಡೆನು. ಮೊದಲನೆಯದು ಆಯ್ಕೆಯ ಸ್ವಾತಂತ್ರ್ಯದ ನಿಜಾನುಭವ, ಎರಡನೆಯದು ಮಾನವನ ಪಾಪ ತುಂಬಿದ ಸ್ವಭಾವದ ನಿಜಾನುಭವ". ಈ ಸತ್ಯವನ್ನು ಚಿಕ್ಕ ಮಕ್ಕಳು ಅವನಿಗೆ ಹೇಗೆ ಕಲಿಸಿರಬಹುದು?

3. ಮಕ್ಕಳು ತಮ್ಮ ಮನಸ್ಸನ್ನು ರೂಪಿಸಿಕೊಳ್ಳುವುದಕ್ಕೆ ಸಮರ್ಪಕವಾದ ಸಮಯ ಯಾವುದು? ಇದನ್ನು ಹೇಗೆ ಮಾಡಬೇಕು? ನಾವೇ ಪರ್ಣವಾಗಿ ನಮ್ಮ ಮನಸ್ಸನ್ನು ದೇವರಿಗೆ ಸಮರ್ಪಿಸದಿದ್ದಾಗ ನಮ್ಮ ಮಕ್ಕಳನ್ನು ದೇವರ ಚಿತ್ತಾನುಸಾರ ಅವರ ಮನಸ್ಸುಗಳನ್ನು ದೇವರ ಚಿತ್ತಾನುಸಾರ ಹೇಗೆ ರೂಪಿಸಲು ಸಾಧ್ಯವಾಗುತ್ತದೆ?

4. ಒಂಟಿ ಪೋಷಕರ ವಿಷಯದಲ್ಲಿ ಹೆಚ್ಚಾಗಿ ಆಲೋಚಿಸಿರಿ. ನಿಜಜೀವನದಲ್ಲಿ ಇಡೀ ಸಭೆಯಾಗಿ ಒಂಟಿ ಪೋಷಕರಿಗೆ ಸಹಾಯ ಮಾಡುವ ವಿಧಾನಗಳು ಯಾವುವು? ಮತ್ತು ತಮ್ಮ ತಾವು ಬೆಳೆಯುವ ಮಕ್ಕಳಿಗೆ ಹೇಗೆ ಸಹಾಯ ಮಾಡುವಿರಿ?

5. ಮಕ್ಕಳು ದಾರಿ ತಪ್ಪಿದಾಗ ಅಂಥವರ ತಂದೆ ತಾಯಿಗಳಿಗೆ ಹೇಗೆ ಧೈರ್ಯ ತುಂಬಬಹುದು?